**ಕರ್ನಾಟಕ ಸರ್ಕಾರ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು**

ಸಂಖ್ಯೆ: ಟಿಸಿಎನ್/13/2018-19 ದಿನಾಂಕ: 21-05-2019

**ಅಧಿಕೃತ ಜ್ಞಾಪನಾ ಪತ್ರ**

ವಿಷಯ:- ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ:09-02-2017 ರ ತೀರ್ಪಿನ ಸಿವಿಲ್ ಅಪೀಲ್ ಸಂಖ್ಯೆ : 2368/2011 ಪ್ರಕರಣದ ಹಿನ್ನೆಲೆಯಲ್ಲಿ ಕಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಹಿಂಬಡ್ತಿಗೊಳಗಾದ ಸಿಬ್ಬಂದಿಗಳಿಗೆ ಹಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಯಲ್ಲಿ ಮುಂದುವರೆಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ:-
1. ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಫೀಲು ಸಂಖ್ಯೆ: 2368/2011-ಬಿ.ಕೆ.ಪವಿತ್ರ ಮತ್ತಿತರರು ವಿರುದ್ಧ-ಯೂನಿಯನ್ ಆಫ್ ಇಂಡಿಯಾ ಮತ್ತು ಸಂಬಂದಿಸಿದ ಇತರ ಪ್ರಕರಣಗಳಲ್ಲಿ ದಿ: 09-02-2017 ರಂದು ನೀಡಿದ ತೀರ್ಪು.
2. ಸರ್ಕಾರದ ಸುತ್ತೋಲೆ ಸಂ: ಸಿಆಸುಇ/639/ಸೇನೆನಿ/2017 ದಿ: 27-03-2018 ಮತ್ತು 04-04-2018
3. ಆಯುಕ್ತಾಲಯದ ಅ.ಜ್ಞಾಪತ್ರ ಸಂ: ಟಿಸಿಎನ್/13/2018-19 ದಿನಾಂಕ: 17-04-2018 (ಅನುಭಂದ-1)
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 27-02-2019
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 05-03-2019
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 15-05-2019

******

ಮೇಲೆ ಓದಲಾದ ಉಲ್ಲೇಖ(1) ರಲ್ಲಿನ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 2368/2011 ಕುರಿತಂತೆ ದಿ: 09-02-2017 ರಂದು ನೀಡಿರುವ ತೀರ್ಪಿನ ಅನ್ವಯ ಹಾಗೂ ಉಲ್ಲೇಖ (2) ರಲ್ಲಿನ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ವಯ ಪರಿಷ್ಕರಿಸಲಾದ ಜ್ಯೇಷ್ಠತಾ ಪಟ್ಟಿಯನ್ನಾದರಿಸಿ ಆಯುಕ್ತಾಲಯದ ಉಲ್ಲೇಖ (3) ರ ಅ.ಜ್ಞಾ ಪತ್ರದಲ್ಲಿ ಹಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಯಿಂದ ಕಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಇಳಿಸಿ ಹಿಂಬಡ್ತಿ ಆದೇಶ ಹೊರಡಿಸಲಾಗಿತ್ತು

ಉಲ್ಲೇಖ (4) ರಲ್ಲಿನ ಸರ್ಕಾರದ ಆದೇಶ ದಿ: 27-02-2019 ರನ್ವಯ ಹಿಂಬಡ್ತಿಗೆ ಒಳಗಾದ ಅಧಿಕಾರಿ/ನೌಕರರನ್ನು ಅವರು ಹಿಂದೆ ಧಾರಣ ಮಾಡಿದ ವೃಂದಗಳಿಗೆ ಮರು ನಿಯುಕ್ತಿಗೊಳಿಸಲು ಹಾಗೂ ಅವರಿಗೆ ಅರ್ಹತಾ ದಿನಾಂಕವನ್ನು ನೀಡಿ ಅಂತಹ ಅರ್ಹತಾ ದಿನಾಂಕದ ಆಧಾರದ ಮೇಲೆ ಕೆಳ ಹಂತದ ವೃಂದಕ್ಕೆ ಹಿಂಬಡ್ತಿಗೊಳಿಸಿದ್ದಲ್ಲಿ ಅಂತಹ ಸರ್ಕಾರಿ ನೌಕರರನ್ನು ಅವರು ಹಿಂಬಡ್ತಿ ಹೊಂದಿದ ನಿಕಟ ಪೂರ್ವದಲ್ಲಿ ಧಾರಣ ಮಾಡಿದ್ದ ವೃಂದಕ್ಕೆ ಹಿಂಬಡ್ತಿ ಹೊಂದಿದ ದಿನಾಂಕದಿಂದಲೇ ಪೂರ್ವನ್ವಯವಾಗಿ ಜಾರಿಗೆ ಬರುವಂತೆ ಮರು ಸ್ಥಳ ನಿಯುಕ್ತಿಗೊಳಿಸುವಂತೆ ಹಾಗೂ ಅವರು ಕೆಳ ಹಂತದ ವೃಂದಗಳಿಗೆ ಹಿಂಬಡ್ತಿಗೊಳ್ಳುವ ಪೂರ್ವದ ವೃಂದದ ವೇತನ ಶ್ರೇಣಿಯಲ್ಲಿ ಮತ್ತು ವೇತನದ ಅದೇ ಹಂತದಲ್ಲಿ ಅವರು ವೇತನವನ್ನು ಪಡೆಯುವುದನ್ನು ಮುಂದುವರಿಸತಕ್ಕದ್ದು ಎಂದು ಆದೇಶಿಸಲಾಗಿದೆ.

. . .2

ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಹಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ವೃಂದದ ಹುದ್ದೆಗಳು ಖಾಲಿ ಇರುವುದರಿಂದ, "ಸೂಪರ್ ನ್ಯೂಮರಿ" ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಈ ಮೇಲಿನ ಅಂಶಗಳನ್ನು ಪರಿಶೀಲನೆ ಮಾಡಿಕೊಂಡು ಮೇಲೆ ಓದಲಾದ ಉಲ್ಲೇಖ (6) ರಲ್ಲಿ ನೀಡಲಾದ ಮಾರ್ಗಸೂಚಿಯಂತೆ ಕಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಹಿಂಬಡ್ತಿಗೊಳಗಾಗಿದ್ದ ನೌಕರರುಗಳಿಗೆ ಹಿಂಬಡ್ತಿಗೊಳಗಾಗುವ ನಿಕಟ ಪೂರ್ವದಲ್ಲಿ ಹೊಂದಿದ್ದ ಹಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಮತ್ತು ಅದೇ ವೇತನ ಶ್ರೇಣಿಯಲ್ಲಿ ಪೂರ್ವಾನ್ವಯವಾಗುವಂತೆ ಮುಂದುವರೆಸಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಖಾಲಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಲು ಆದೇಶಿಸಿದೆ.

| ಕ್ರಮ ಸಂ | ನೌಕರರ ಹೆಸರು ಹಾಗೂ ಹಿಂಬಡ್ತಿಗೊಳ್ಳುವ ಪೂರ್ವ ಕಾರ್ಯನಿರ್ವಹಿಸುತ್ತಿದ್ದ ಸ್ಥಳ | ಪ್ರಸ್ತುತ ಕಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಹಿರಿಯ ವೈದ್ಯಕೀಯ ರೇಡಿಯಾಲಜಿಕಲ್ ಟೆಕ್ನಾಲಾಜಿಸ್ಟ್‌ಗಳ ಹುದ್ದೆಯಲ್ಲಿ ನಿಯುಕ್ತಿಗೊಳಿಸಿದ ಸ್ಥಳ | ಷರಾ |
|---|---|---|---|---|
| 01 | ಶ್ರೀ ಮಲ್ಲರೆಡ್ಡಪ್ಪ ಜಿಲ್ಲಾ ಆಸ್ಪತ್ರೆ, ಕಲಬುರಗಿ. | ಸ.ಆ.ಕೇಂದ್ರ, ಸ್ಟೇಷನ್ ಗಾಣಗಾಪುರ ಅಫಜಲಪುರ, ಕಲಬುರಗಿ ಜಿಲ್ಲೆ. | ಜಿಲ್ಲಾ ಆಸ್ಪತ್ರೆ, ಕಲಬುರಗಿ | |
| 02 | ಶ್ರೀ ಉಮೇಶ್ ಸಿ.ಕೆ. ಸಾರ್ವಜನಿಕ ಆಸ್ಪತ್ರೆ, (ಟ್ರಾಮಕೇರ್) ಶಿರಾ, ತುಮಕೂರು. | ಸಾರ್ವಜನಿಕ ಆಸ್ಪತ್ರೆ, ಚಿ.ನಾ. ಹಳ್ಳಿ, ತುಮಕೂರು ಜಿಲ್ಲೆ. | ಸಾರ್ವಜನಿಕ ಆಸ್ಪತ್ರೆ, (ಟ್ರಾಮಕೇರ್) ಶಿರಾ, ತುಮಕೂರು | |

ಮೇಲ್ಕಂಡ ಆದೇಶವು ಜ್ಯೇಷ್ಠತೆ ಮತ್ತು ಸಮೀಕ್ಷೆಗೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪು/ ಆದೇಶಕ್ಕೆ ಒಳಪಟ್ಟಿರುತ್ತದೆ.

ಲೋಕಸಭಾ ಸಾರ್ವತ್ರಿಕ ಚುನವಣಾ ಕಾರ್ಯಕ್ಕೆ ನಿಯೋಜಿತವಾಗಿರುವ ಅಧಿಕಾರಿ/ನೌಕರರು ಸದರಿ ಚುನವಣಾ ಮಾದರಿ ನೀತಿ ಸಂಹಿತೆ ಅವಧಿ ಪೂರ್ಣಗೊಂಡ ನಂತರ ನೇಮಕ ಮಾಡಿರುವ ಸ್ಥಳಕ್ಕೆ ಕೂಡಲೇ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ವರದಿ ಮಾಡಿಕೊಂಡ ಬಗ್ಗೆ ನಿರ್ದೇಶನಾಲಯಕ್ಕೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಕಲಬುರಗಿ.
3. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, (ಟ್ರಾಮಕೇರ್) ಶಿರಾ, ತುಮಕೂರು./ಸ.ಆ.ಕೇಂದ್ರ, ಸ್ಟೇಷನ್ ಗಾಣಗಾಪುರ ಅಫಜಲಪುರ, ಕಲಬುರಗಿ ಜಿಲ್ಲೆ./ ಸಾರ್ವಜನಿಕ ಆಸ್ಪತ್ರೆ, ಚಿ.ನಾ. ಹಳ್ಳಿ, ತುಮಕೂರು ಜಿಲ್ಲೆ.
4. ಸಂಬಂಧಪಟ್ಟ ನೌಕರರಿಗೆ
5. ಕಛೇರಿ ಪ್ರತಿ.